# ಮಾದರಿ ಪ್ರಶ್ನೆಪತ್ರಿಕೆ –03

**ವಿಷಯ : ಪ್ರಥಮ ಭಾಷೆ ಕನ್ನಡ**

**ತರಗತಿ : 10ನೇ ತರಗತಿ** **ಅಂಕಗಳು:–100**

**ಸಮಯ:–3.15**

**1. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **1x6=6**

1. ' ಕಳುವ್ಯಾರೆ ' ಪದದ ಗ್ರಾಂಥಿಕ ರೂಪವಿದು.
   ಎ) ಕಳುಹಿಸಿದ್ದಾರೆ ಬಿ) ಕಳುಹಿಸುತ್ತಾರೆ ಸಿ) ಕಳುಹಿಸುವರು ಡಿ) ಕಳುಹಿಸುವುದು
2. ಸಪ್ತಮಿ ವಿಭಕ್ತಿಯ ಕಾರಕಾರ್ಥವಿದು :
   ಎ) ಕರ್ಮಾರ್ಥ ಬಿ) ಸಂಪ್ರದಾನಾರ್ಥ ಸಿ) ಅಧಿಕರಣಾರ್ಥ ಡಿ) ಕರಣಾರ್ಥ
3. 'ದಡ ದಡ' ಪದ ಈ ಅವ್ಯಯಕ್ಕೆ ಉದಾಹರಣೆಯಾಗಿದೆ.
   ಎ) ಸಾಮಾನ್ಯಾವ್ಯಯ ಬಿ) ಭಾವಸೂಚಕಾವ್ಯಯ ಸಿ) ಕ್ರಿಯಾರ್ಥಕಾವ್ಯಯ ಡಿ) ಅನುಕರುಣಾವ್ಯಯ
4. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಲೇಖನಚಿಹ್ನೆಯನ್ನು ಬಳಸಲಾಗುತ್ತದೆ : ..............................
   ಎ) ಅಲ್ಪವಿರಾಮ ಬಿ) ಆವರಣ ಸಿ) ಉದ್ಧರಣ ಡಿ) ಪೂರ್ಣವಿರಾಮ
5. ಜಸ್ತ್ವಸಂಧಿಗೆ ಉದಾಹರಣೆಯಾದ ಪದವಿದು ..............................
   ಎ) ಅತ್ಯವಸರ ಬಿ) ಮೈದೋರು ಸಿ) ದಿಗಂತ ಡಿ) ಬೆಂಬತ್ತು
6. 'ಹಿಂದಲೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ ..........................
   ಎ) ಕರ್ಮಧಾರೆಯ ಸಮಾಸ ಬಿ) ತತ್ಪುರುಷ ಸಮಾಸ ಸಿ) ಅಂಶಿ ಸಮಾಸ ಡಿ) ಕ್ರಿಯಾ ಸಮಾಸ

**2. ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :–** **1x4=4**

7. ವೈಶಾಖ : ಬೇಸುಗೆ :: ಕುಠಾರ : ...................
8. ಮಹಾ ಪ್ರಾಣ ವ್ಯಂಜನಗಳು : ಹತ್ತು :: ಅನುನಾಸಿಕಗಳು : ...................
9. ಕೈಯಾನು : ಕೈಚಾಚು :: ಕೈವಾರ : ...................
10. ಮಾಡಲಿ : ವಿಧ್ಯರ್ಥಕ :: ಮಾಡದು : ...................

**3. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :–** **1x7=7**

11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?
12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣ ಬದ್ಧರಾದರು ?
13. ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಯಾರು ?
14. ಹುಲಿಗೆ ಪರಮಾನಂದವಾಗಲು ಕಾರಣವೇನು ?
15. ನದೀ ಜಲಗಳು ಏನಾಗಿವೆ ?
16. ಹಲಗಲಿಯ ನಾಲ್ವರು ಪ್ರಮುಖರು ಯಾರು ?
17. ಯಾರಿಗೆ ವಸಂತ ಮುಖ ತೋರಲಿಲ್ಲ ?

**4. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ :–** **10x2=20**

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
19. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?

20. ದುಷ್ಟ ಬುದ್ಧಿಗೆ ಧರ್ಮಬುದ್ಧಿಯು ಯಾವ ಸಲಹೆಯಿತ್ತನು ?

21. ಹಡುಗನ್ನು ಯಾವುದರ ಬೆಳಕಿನಲ್ಲಿ ಮುನ್ನಡಸಬೇಕಿದೆ ?

22. ಹಲಗಲಿ ಬೇಡರು ದಂಗೆ ಏಳಲು ಕಾರಣವೇನು ?

23. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?

24. ವಿವೇಕಾನಂದರು ಮನುಷ್ಯತ್ವದ ಮಹಿಮೆಯನ್ನು ಕುರಿತು ಏನೆಂದು ಘೋಷಿಸಿದ್ದಾರೆ ?

25. ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.

26. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು ?

27. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

**5. ಕೆಳಗಿನ ಕವಿಗಳ / ಕಾಲ, ಕೃತಿ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :- 2x3=6**

28. ದೇವನೂರು ಮಹಾದೇವ

29. ಕುಮಾರವ್ಯಾಸ

**6. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :- 1x3=3**

30. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ।
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ ।
ಪೊತ್ತುಮಾಕ್ಕೈವುನೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ॥

**7. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ :- 1x3=3**

31. " ಮಾರಿಗೌತಣವಾಯ್ತು ನಾಳಿನ ಭಾರತವು "

**8. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :- 1x3=3**

32. ಕಟ್ಟುವುದು ಕಠಿಣ, ಕೆಡುಸುವುದು ಸುಲಭ.
ಅಥವಾ
ಹೆತ್ತ ತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.

**9. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ :- 3x6=18**

33. "ತಾಯಿ ದಾರಿಗರಿಗೆ ಬೀಡಲ್ಲಿ ದೊರೆಯುವುದೇ"

34. "ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು"

35. "ಪ್ರಕೃತಿ ವಿಕೃತಿಯೊಂದಿಗೆ ಮನುಷ್ಯನಾಯುಷ್ಯಂ ಕುಂದುಗುಂ"

36. "ಹೊಸ ಎಚ್ಚರದೊಳು ಬದುಕೋಣ"

37. "ಸಮರದೊಳಗೆನಜ್ಜ ಪೇಳಿಮಾವುದು ಕಜ್ಜಂ"

38. "ಅರಸುಗಳ ವಾಜಿಯಂ ಬಿಡು"

**10. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :- 1x4=4**

39. ಹಸುರಾಗಸ ..........................................
..........................................
..........................................
.......................................... ಬಿಸಿಲು.

ಅಥವಾ

ಹೊಸ ಹೂವಿನ ..........................................
..........................................
..........................................
..........................................ಯುಸಿಗೂ।

**11. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. ಬಲ್ಗಯ್ಯ ನೃಪರಂಜಿ ತಡೆಯದೆ ರಘುನಿದ್ವಹನ । **1x4=4**
ಸೋಲ್ಗೇಳಿ ನಮಿಸಲಿಳೆಯೊಳ್ ಚರಿಸುತದ್ವರದ ।
ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೋಳು ॥

**12. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :– 2x4=8**

41. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು ?

ಅಥವಾ

ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

42. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು ?

ಅಥವಾ

ಕಾಲ ಪಕ್ಷಿಯ ವೇಗವನ್ನು ದ॥ ರಾ॥ ಬೇಂದ್ರೆಯವರು ಹಕ್ಕಿ ಹಾರುತ್ತಿದೆ ನೋಡಿದಿರಾ ಪದ್ಯದಲ್ಲಿ ಹೇಗೆ ವರ್ಣಿಸಿದ್ದಾರೆ ?

**13. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :–**

43. ಅಂದು ಮಹಾರಾಜ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂಬ ತೃಪ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಅವರಲ್ಲಿ ಜ್ಞಾನ ಸಂಪತ್ತಿನ ಜೊತೆಗೆ ನೈತಿಕ ಸಂಪತ್ತು ಇತ್ತು. ಮಹಾರಾಜ ಕಾಲೇಜಿನಲ್ಲಿಯೂ ಮಂಜಪ್ಪನವರಿಗೆ ವಿದ್ಯಾರ್ಥಿವೇತನ ಲಭ್ಯವಾಗಿತ್ತು. ವಿದ್ಯಾರ್ಥಿವೇತನದಿಂದಲೆ ಅವರು ಜೀವನ ನಿರ್ವಹಿಸುತ್ತಿದ್ದರು. ಕಡಿದಾಳ್ ಮಂಜಪ್ಪನವರು ಕಾಲೇಜಿನಲ್ಲಿ ಬಿಡುವಿದ್ದಾಗ ವಾಚನಾಲಯದಲ್ಲಿದ್ದ ದಿನ ಪತ್ರಿಕೆಗಳನ್ನು ತಪ್ಪದೇ ಓದುತ್ತಿದ್ದರು. ಮಹಾತ್ಮ ಗಾಂಧಿಜೀಯಂತಹ ರಾಷ್ಟ್ರ ಭಕ್ತರ ಭಾಷಣಗಳು, ಲೇಖನಗಳು ಅವರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನು ಉಂಟು ಮಾಡಿದ್ದವು. ಹೇಗಲ್, ಕ್ಯಾಂಟೆ, ವಾಲ್ಟೇರ್, ರೂಸೋ ಮುಂತಾದ ದಾರ್ಶನಿಕರ ಕೃತಿಗಳನ್ನು ಗ್ರೀಕ್ ಮಹಾ ಕವಿ ಹೋಮರನ ಇಲಿಯಡ್ ಮತ್ತು ಒಡಿಸ್ಸಿ ಮಹಾ ಕಾವ್ಯಗಳನ್ನು ಗಿಬ್ಬನ್ ಅವರ ಉನ್ನತಿ ಮತ್ತು ಅವನತಿ ಗ್ರಂಥವನ್ನು ರವೀಂದ್ರನಾಥ ಠಾಕೋರ್, ಬರ್ನಾಡ್‌ಷಾ, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳನ್ನು ಓದಿರುವುದರಿಂದ ಮಂಜಪ್ಪನವರ ಮನಸ್ಸು ಬಹಳ ವಿಕಾಸಗೊಂಡಿತ್ತು. ಅಂದು ಜ್ಞಾನ ಸಂಪಾದನೆ ವಿದ್ಯಾರ್ಥಿಗಳ ಮುಖ್ಯ ಗುರಿಯಾಗಿದ್ದರೆ ; ಇಂದು ಪರೀಕ್ಷೆಯಲ್ಲಿ ಹೇಗಾದರೂ ಮಾಡಿ ಉತ್ತೀರ್ಣರಾಗುವುದು ಗುರಿಯಾಗಿದೆ.

**ಪ್ರಶ್ನೆಗಳು :– 2x2=4**

1) ಅಂದು ಮಹಾರಾಜ ಕಾಲೇಜಿನ ಅಧ್ಯಾಪಕರು ಹೇಗೆ ಕಾರ್ಯನಿರ್ವಹಿಸುತ್ತಿದ್ದರು ?

2) ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳುಯಾವುವು ?

**14. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :-** **1x5=5**

44. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಕಾರಮಂಗಲ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ ಇಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರೀ ಹರಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಜರುಗಿದ್ದ ಶಾಲಾ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಕೋರಿ ಬೆಂಗಳೂರಿನ ಪ್ರಜಾವಾಣಿ ದಿನ ಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರಿಯಿರಿ.

ಅಥವಾ

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಹನುಮನಹಳ್ಳಿಯ 'ಸಹನ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆಯಲಿರುವ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮಕ್ಕೆ ಆಹ್ವಾನಿಸಿ ಬೆಂಗಳೂರಿನ ಸರಸ್ವತೀಪುರಂನಲ್ಲಿ ವಾಸಿಸುತ್ತಿರುವ 'ಸಂಜನ' ಎಂಬ ಗೆಳತಿಗೆ ಪತ್ರವನ್ನು ಬರೆಯಿರಿ.

**15. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

45. ಸಾಮಾಜಿಕ ಪಿಡುಗುಗಳು **1x5=5**

ಅಥವಾ

ರಾಷ್ಟ್ರೀಯ ಭಾವೈಕ್ಯತೆ.